Rotary
ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD

Rtn. Francesco Arezzo
R.I. President

Rtn. K. Palaksha
District Governor

ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ
ಐಶ್ವರ್ಯ
ಸಂಪುಟ: 4 ವಿ ಸಾಪ್ತಾಹಿಕ ಸಂಚಿಕೆ : 32
ದಿನಾಂಕ: 10.02.2026

Rtn. Anil Kumar
President

Rtn. Krishnappa
Secretary

ನಮ್ಮ ಆರ್.ಸಿ.ಸಿ. ಐಸಿರಿ Best Club ಪ್ರಥಮ ಸ್ಥಾನಿ

ರೋಟರಿ ಅಂತಾರಾಷ್ಟ್ರೀಯ ಜಿಲ್ಲೆ 3182ರ ರೋಟರಿ ಸಮುದಾಯದಳಗಳ (Rotary Community Corps – RCC) ಜಿಲ್ಲಾ ಸಮ್ಮೇಳನ "ಸಾಂಗತ್ಯ" ದಲ್ಲಿ ನಮ್ಮ ಸಮುದಾಯದಳ ಆರ್.ಸಿ.ಸಿ. ಐಸಿರಿಯು ಬೆಸ್ಟ್ ಕ್ಲಬ್ ಪ್ರಥಮ ಸ್ಥಾನ ಪಡೆದು ಗೌರವಕ್ಕೆ ಪಾತ್ರವಾಗಿದೆ.

ಅಲ್ಲದೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿಯೂ ನಮ್ಮ ಸಮುದಾಯದಳ ಮೊದಲನೇ ಬಹುಮಾನ ಪಡೆದು, ಗೆಲುವಿನ ಸಂಭ್ರಮಕ್ಕೆ ಮತ್ತಷ್ಟು ಮೆರುಗನ್ನು ನೀಡಿತು.

ಕಳೆದ ಭಾನುವಾರ, ಫೆಬ್ರವರಿ 8ರಂದು ರೋಟರಿ ಕ್ಲಬ್ ಕಾರ್ಕಳದ ಆತಿಥ್ಯದಲ್ಲಿ ಭುವನೇಂದ್ರ ಕಾಲೇಜಿನ ಸಭಾಂಗಣದಲ್ಲಿ ನಡೆದ ಈ ಜಿಲ್ಲಾ ಸಮ್ಮೇಳನವನ್ನು ಜಿಲ್ಲಾ ರಾಜ್ಯಪಾಲ ರೊ. ಪಾಲಾಕ್ಷ ಕೆ. ಉದ್ಘಾಟಿಸಿದರು.

ರೋಟರಿ ಕ್ಲಬ್ ಕಾರ್ಕಳದ ಅಧ್ಯಕ್ಷ ರೊ. ಕೆ. ನವೀನ್ ಚಂದ್ರ ಶೆಟ್ಟಿ ಕಾರ್ಯಕ್ರಮದಅಧ್ಯಕ್ಷತೆ ವಹಿಸಿದ್ದರು. ಗೌರವ ಅತಿಥಿಯಾಗಿ ಶ್ರೀ ಭುವನೇಂದ್ರ ಕಾಲೇಜಿನ ಪ್ರಾಂಶುಪಾಲ ಡಾ. ಮಂಜುನಾಥ ಕೋಟ್ಯಾನ್, ಮುಖ್ಯ ಅತಿಥಿಯವರಾಗಿ ಜಿಲ್ಲಾ ತರಬೇತುದಾರ PDG ರೊ. ರಾಜಾರಾಮ ಭಟ್, ನಿಕಟಪೂರ್ವ ಜಿಲ್ಲಾ ರಾಜ್ಯಪಾಲ ರೊ. ಸಿ.ಎ. ದೇವ್ ಆನಂದ್, PDG ರೊ. ಬಿ. ಎನ್. ರಮೇಶ್, ರೊ.ಬಿ.ಎಂ.ಭಟ್, PDG ರೊ. ಬಿ. ಸಿ. ಗೀತಾ, ಜಿಲ್ಲಾ ಕಾರ್ಯದರ್ಶಿ ರೊ. ಡಿ. ಎಂ. ಜಲೇಂದ್ರ, ರೊ. ಪ್ರದೀಪ್ ಜಿ. ಎಸ್., RCC ಜಿಲ್ಲಾ ಸಭಾಪತಿ ರೊ. ಅಲೆನ್ ವಿ. ಲೂಯಿಸ್, RCC ಜಿಲ್ಲಾ ಉಪಸಭಾಪತಿ ರೊ. ಗುರುಪ್ರಸಾದ್ ಕಾಮತ್, ಸಹಾಯಕ ಗವರ್ನರ್ (ವಲಯ 5) ರೊ. ವಿಘ್ನೇಶ್ ಶೆಣೈ, ವಲಯ ಸೇನಾನಿ (ವಲಯ 5), ರೊ. ಜಾನ್ ಆರ್. ಡಿ'ಸಿಲ್ವಾ, 2024–25 RCC ಜಿಲ್ಲಾ ಪ್ರತಿನಿಧಿ ರೊ. ಪ್ರಸಾದ್ ಆಚಾರ್ಯ ಪಾದೂರು, 2025–26 RCC ಜಿಲ್ಲಾ ಪ್ರತಿನಿಧಿ ರೊ. ಜಯರಾಮ್ ಶೆಟ್ಟಿಗಾರ್ ಉಪಸ್ಥಿತರಿದ್ದರು.

ಸಾಯಂಕಾಲ ನಡೆದ ಸಮಾರೋಪ ಸಮಾರಂಭದಲ್ಲಿ DGN ರೊ. ವಸಂತ ಹೋಬ್ಳಿದಾರ್ ಮತ್ತು 2024–25 RCC ಜಿಲ್ಲಾ ಸಭಾಪತಿ ಮಂಡಲೀಕ ಮರಾಠೆ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಅತ್ಯುತ್ತಮ ಭಾಷಣಕಾರರಿಂದ ಪ್ರೇರಣಾ ಭಾಷಣಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಈ ಸಮ್ಮೇಳನದಲ್ಲಿ ಆರ್.ಸಿ.ಸಿ. ಐಸಿರಿ ಮತ್ತು ರೋಟರಿ ಐಸಿರಿಯಿಂದ ಸುಮಾರು ಐವತ್ತರಷ್ಟು ಸದಸ್ಯರು ಭಾಗವಹಿಸಿದ್ದರು.

ನಾನು ಮತ್ತು ಪಲ್ಲವಿ ಭಾಗವಹಿಸಿದ ಮೊದಲ ರೋಟರಿ ಜಿಲ್ಲಾ ಸಮ್ಮೇಳನ *(ಕಳೆದೆರಡು ಸಂಚಿಕೆಗಳಿಂದ)* ಲೇಖನ ರೊ. ರಾಜೇಶ್ ಡಿ. ಶೆಣೈ ಮತ್ತು ಆನ್ ಪಲ್ಲವಿ

ಜನವರಿ 23ರ ಬೆಳಿಗ್ಗೆ 8.00ಘಂಟೆಗೆ ಪರ್ಕಳದಿಂದ ಹೊರಟ ನಾವು ಮಧ್ಯಾಹ್ನ 2.30ರ ಸುಮಾರಿಗೆ ಹಾಸನ ತಲುಪಿ, ಸಮ್ಮೇಳನ ಸಭಾಂಗಣವನ್ನು ಸಾಯಂಕಾಲ ತಲುಪಿದೆವು. ಮೊದಲ ದಿನದ ಉದ್ಘಾಟನಾ ಸಮಾರಂಭ, ಊಟೋಪಚಾರ, ಎರಡನೇ ದಿನದ ಪಥಸಂಚಲನ ಮೆರವಣಿಗೆ, ಧ್ವಜಾರೋಹಣ, ಫೋಟೋ ಸೆಷನ್, ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿ, ವಿಜ್ಞಾನಿ ಡಾ. ಎಸ್. ಸೋಮನಾಥ್, ಮಾಜಿ DGMO ಲೆಫ್ಟಿನೆಂಟ್ ಜನರಲ್ ಬಿ. ಎಸ್. ರಾಜು., ಹದಿನಾರರ ಹರೆಯದ ಉದ್ಯಮಿ ರಾವುಲ್ ಜಾನ್ ಆಜೂರ ಭಾಷಣದ ತನಕದ ಪಯಣವನ್ನು ಹಿಂದಿನೆರಡು ಸಂಚಿಕೆಗಳಲ್ಲಿ ಹೇಳಿದ್ದೆವು. ....

ನಂತರದ ಮುಖ್ಯ ಭಾಷಣಕಾರರು ಖ್ಯಾತ ಹಾಸ್ಯ ಕಲಾವಿದ, ಲೇಖಕ, ಕನ್ನಡ ವಿದ್ವಾಂಸ, ಶಿಕ್ಷಣ ತಜ್ಞ ಪ್ರೊ. ಕೃಷ್ಣೇಗೌಡರು. ಇವರು ತಮ್ಮ ಎಂದಿನ ಶೈಲಿಯಲ್ಲಿ ಮಾತನಾಡುತ್ತ, ಮನುಷ್ಯನಲ್ಲಿ ಮೊದಲು ತಾನು ಏನಾದರು ಆಗಬೇಕು ಎನ್ನುವ ತುಡಿತ ಕಾಣಿಸಿಕೊಳ್ಳಬೇಕು. ಏನಾದರು ಆಗು ಎನ್ನುವುದು ತೀವ್ರವಾದಂತೆ ನಾವು ಬೆಳೆಯುತ್ತೇವೆ. ಯಶಸ್ಸನ್ನು ಕಂಡುಕೊಳ್ಳುತ್ತೇವೆ. ಹಾಗಾಗಿ ಈ ಆಗುವಿಕೆ ತೀವ್ರವಾದರೆ ಏನಾದರೂ ಆಗ್ತೀವಿ ಎಂದರು. ಮತ್ತು ರಾಷ್ಟ್ರಕವಿ ಕುವೆಂಪುರವರ "ಏನಾದರೂ ಆಗು, ಮೊದಲು ಮಾನವನಾಗು" ಎನ್ನುವ ನುಡಿಗಳನ್ನು ಉಲ್ಲೇಖಿಸಿ, ನಮ್ಮ ಹಿರಿಯರಿಗೆ ಈಗಿನವರಷ್ಟು ಲೆಕ್ಕ ಗೊತ್ತಿರಲಿಲ್ಲ ಆದರೆ ಅವರಿಗೆ ಬದುಕು ಗೊತ್ತಿತ್ತು ಎಂದು ಮಾರ್ಮಿಕವಾಗಿ ಮಾತನಾಡಿದರು.

ಬಳಿಕ ಯಂಗ್ ಅಚೀವರ್ ಅವಾರ್ಡ್ (ಯುವ ಸಾಧಕ ಪ್ರಶಸ್ತಿ) ನೀಡುವ ಸಮಾರಂಭ, ರೊ. ಬಿ. ಎಂ. ಭಟ್ ನೇತೃತ್ವದ ತಂಡದ ಪರಿಚಯ ನಿರೂಪಣೆ ಮತ್ತು "ಭೀಮರಥ" 11ನೇ ಜಿಲ್ಲಾ ಸಮ್ಮೇಳನದ ಅಹ್ವಾನ ಕಾರ್ಯಕ್ರಮ ನಡೆಯಿತು.

ಸಾಯಂಕಾಲ ಖ್ಯಾತ "Team Chameleons" ತಂಡದವರಿಂದ ಇಡೀ ಸಭಾಂಗಣವೇ ಸಂಪೂರ್ಣವಾಗಿ ಆನಂದಿಸಿದ ಅದ್ಭುತ ಮನೋರಂಜನಾ ಕಾರ್ಯಕ್ರಮ ನಡೆಯಿತು. ಸೌಹಾರ್ದಕೂಟ, ಭೋಜನದ ಬಳಿಕ ಎರಡೆಯನೇ ದಿನದ ಕಾರ್ಯಕ್ರಮ ಅಂತ್ಯವಾಯಿತು. ಸುಮಾರು ಹನ್ನೊಂದು ಘಂಟೆಯ ವೇಳೆಗೆ ನಾವೂ ನಮ್ಮ ವಾಸ್ತವ್ಯದತ್ತ ಹೆಜ್ಜೆ ಹಾಕಿದೆವು.

ಮೂರನೇ ದಿನ ಸುಗ್ರಾಸ ಉಪಹಾರದ ಬಳಿಕ ಜಿಲ್ಲಾ ರಾಜ್ಯಪಾಲ ರೊ. ಪಾಲಾಕ್ಷ ಅವರ ಸ್ವಾಗತ ಭಾಷಣದೊಂದಿಗೆ ಸಭೆ ಆರಂಭವಾಯಿತು. ಮೊದಲು ಮಾತನಾಡಿದ ರೋಟರಿ ಅಂತಾರಾಷ್ಟ್ರೀಯ ಪ್ರತಿನಿಧಿ ರೊ. ತುಷಾರ್ ಷಾ ರೋಟರಿ ಮೀಟಿಂಗ್ ಪರಿಣಾಮಕಾರಿಯಾಗಿಸುವ ಬಗ್ಗೆ ಬಹಳಷ್ಟು ಉಪಯುಕ್ತ ಸಲಹೆಗಳನ್ನು ನೀಡಿದರು. ಪಕ್ಕದ ಊರುಗಳಲ್ಲಿ ಸ್ಯಾಟೆಲೈಟ್ ಕ್ಲಬ್ ಆರಂಭಿಸುವುದು, ವಿಷಯಾಧಾರಿತ ಕ್ಲಬ್ ಗಳನ್ನು ಆರಂಭಿಸುವುದು, ಕ್ರಿಕೆಟ್ ಮುಂತಾದ ಕ್ರೀಡಾ ತಂಡಗಳನ್ನೊಳಗೊಂಡ ಕ್ಲಬ್ ಹೀಗೆ ವಿವಿಧ ಸ್ವರೂಪಗಳ ಸದಸ್ಯತನದ ಕ್ಲಬ್ ವಿಸ್ತರಿಸಲು ಕರೆ ನೀಡಿದರು.

ಬಳಿಕ ಮಾತನಾಡಿದ ಉದ್ಯಮಿ, ದಿ. ರತನ್ ಟಾಟಾ ಜತೆ ಕಾರ್ಯನಿರ್ವಹಿಸಿದ, ಟಾಟಾ ಸನ್ಸ್ ಸಮೂಹದ ಸಲಹೆಗಾರ, ಟಾಟಾ ಟ್ರಸ್ಟ್ ಗಳಿಗೆ ಹಿರಿಯ ಸಲಹಾಕಾರ, TATA Institute of Social Science ನ Vocational Skill Development ನ CEO, 26/11 ಮುಂಬೈ ಭಯೋತ್ಪಾದಕ ದಾಳಿಯ ನಂತರ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳನ್ನು ಮುನ್ನಡೆಸಿದ ಶ್ರೀ H N ಶ್ರೀನಿವಾಸ್, ಭಾರತದ ಕೈಗಾರಿಕಾ ಕ್ರಾಂತಿಯ ಪಿತಾಮಹ ಮತ್ತು ಟಾಟಾ ಸಮೂಹದ ಸ್ಥಾಪಕ ಜಮ್‌ಸೆಟ್‌ಜಿ ನುಸ್ಸರ್ವಾಂಜಿ ಟಾಟಾರವರು ತಮ್ಮ 29ನೇ ವಯಸ್ಸಿನಲ್ಲಿ 21,000 ರೂಪಾಯಿಗಳ ಬಂಡವಾಳದೊಂದಿಗೆ ಟಾಟಾ ಸಮೂಹವನ್ನು ಸ್ಥಾಪಿಸಿದ ಪರಿ, ಟಾಟಾ ಸ್ಟೀಲ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (IISc), ಮತ್ತು ತಾಜ್ ಮಹಲ್ ಹೋಟೆಲ್‌ನಂತಹ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ

ಭಾರತದ ಆರ್ಥಿಕ ಮತ್ತು ಕೈಗಾರಿಕಾ ಬೆಳವಣಿಗೆಗೆ ಭದ್ರ ಅಡಿಪಾಯ ಹಾಕಿದ ಅವರ ದೂರದೃಷ್ಟಿ ಮತ್ತು ಬದ್ಧತೆಯು ಇಂದಿಗೂ ಭಾರತೀಯ ಉದ್ಯಮ ಜಗತ್ತಿಗೆ ಹೇಗೆ ಸ್ಫೂರ್ತಿಯಾಗಿದೆ, ಕೇವಲ ಲಾಭಕ್ಕಾಗಿ ಉದ್ಯಮ ನಡೆಸದೆ, ಕಾರ್ಮಿಕರ ಕ್ಷೇಮಕ್ಕಾಗಿ ಪಿಂಚಣಿ ಮತ್ತು ಅಪಘಾತ ವಿಮೆಯಂತಹ ಸೌಲಭ್ಯಗಳನ್ನು ಮೊದಲ ಬಾರಿಗೆ ಪರಿಚಯಿಸಿ, ಕಳೆದ ಶತಮಾನದ ಜಗತ್ತಿನ ಅತಿದೊಡ್ಡ ದಾನಿ ಎಂಬ ಗೌರವಕ್ಕೆ ಇವರು ಪಾತ್ರರಾದ ರೀತಿ, 2008ರ ನವೆಂಬರ್ 26ರ ಮುಂಬೈ ತಾಜ್ ಹೋಟೆಲ್ ಮೇಲಿನ ಉಗ್ರರ ದಾಳಿಯ ಸಂದರ್ಭದಲ್ಲಿ, ಇಡೀ ದೇಶಕ್ಕೆ ಮಾದರಿಯಾದ ಅಂದಿನ ಟಾಟಾ ಗ್ರೂಪ್ ಮುಖ್ಯಸ್ಥ ರತನ್ ಟಾಟಾ ಅವರ ಧೈರ್ಯ, ನಾಯಕತ್ವ ಮತ್ತು ಮಾನವೀಯತೆ, 70 ವರ್ಷದ ಅವರು ಮೂರು ದಿನಗಳ ಕಾಲ ಹೋಟೆಲ್‌ನ ಹೊರಗಿನ ಪಾದಚಾರಿ ಮಾರ್ಗದಲ್ಲೇ ನಿಂತು, ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಾ

(ಕೊನೆಯ ಪುಟಕ್ಕೆ)

ಬೌದ್ಧಿಕ ಸಿರಿ ನಾಯಿಯ ಭ್ರಮೆ !

ಶ್ರೀಮಂತ ಮಹಿಳೆಯೊಬ್ಬಳು ಪಶುವೈದ್ಯರ ಬಳಿಗೆ ಬಂದಳು, ಆಕೆಯೊಂದಿಗೆ ಒಂದು high breed ನಾಯಿ ಇತ್ತು. ಆಕೆ ವೈದ್ಯರಿಗೆ ಹೇಳಿದಳು:

"ಈ ನಾಯಿಯನ್ನು ನಾನು ತುಂಬಾ ತುಂಬಾ ಹಚ್ಚಿಕೊಂಡಿದ್ದೇನೆ. ಇತ್ತೀಚಿಗೆ ಇದು ವಿಚಿತ್ರವಾಗಿ ಆಡುತ್ತಿದೆ. ನನ್ನ ಬಳಿ ತುಂಬಾ ಅವಿಧೇಯವಾಗಿದೆ. ನಾನು ಹತ್ತಿರ ಕರೆದರೆ ಅದು ಓಡಿಹೋಗುತ್ತದೆ. ಅದು ನನ್ನ ಬಗ್ಗೆ ತೋರುವ ಅಸಡ್ಡೆಯನ್ನು ನಾನು ಸಹಿಸಲಾರೆ. ದಯವಿಟ್ಟು ಏನಾದರೂ ಮಾಡೀ..." ಎಂದಳು.

ಆ ಪಶುವೈದ್ಯರು ನಾಯಿಯನ್ನು ಹತ್ತಿರದಿಂದ ನೋಡಿ, ಹದಿನೈದು ನಿಮಿಷಗಳ ಕಾಲ ನಾನಾ ರೀತಿಯಲ್ಲಿ ಪರೀಕ್ಷಿಸಿದ ಅನಂತರ ಹೇಳಿದರು, "ಈ ನಾಯಿಯನ್ನು ಈ ಒಂದು ರಾತ್ರಿ ನನ್ನೊಂದಿಗೆ ಬಿಡಿ. ನಾನು ಅದನ್ನು ಚೆನ್ನಾಗಿ ಗಮನಿಸಿ, ಪರೀಕ್ಷಿಸಿ, ಚಿಕಿತ್ಸೆ ನೀಡುತ್ತೇನೆ" ಎಂದರು.

ಅದಕ್ಕೆ ಆ ಮಹಿಳೆ ಒಪ್ಪಿಕೊಂಡಳು.

ಆಕೆ ತೆರಳಿದ ನಂತರ ಆ ಪಶುವೈದ್ಯರು ತಮ್ಮ ಸಹಾಯಕರನ್ನು ಕೂಗಿ ಹೇಳಿದರು: "ಈ ನಾಯಿಯನ್ನು ಅಲ್ಲಿರುವ ಎಮ್ಮೆಗಳೊಂದಿಗೆ ಕಟ್ಟಿ. ಪ್ರತಿ ಅರ್ಧ ಗಂಟೆಗೊಮ್ಮೆ ನೀರನ್ನು ಮಾತ್ರ ಕೊಡಿ. ಬೇರೇ ಯಾವುದೇ ಆಹಾರ ನೀಡಬೇಡಿ ಮತ್ತು ಆಗಾಗ್ಗೆ ಚರ್ಮದ ಬಾರುಕೋಲಿನಿಂದ ಬಿಡದೇ ಚೆನ್ನಾಗಿ ಬಾರಿಸುತ್ತಿರಬೇಕು". ಎಂದು ಹೇಳಿದರು.

ಆ ಪಶುವೈದ್ಯರ ಸಹಾಯಕ ಬಲವಾದ ವ್ಯಕ್ತಿಯಾಗಿದ್ದ. ಆ ವೈದ್ಯರು ಹೇಳಿದಂತೆಯೇ ರಾತ್ರಿಯಿಡೀ ನಾಯಿಗೆ ಚೆನ್ನಾಗಿ ಬಾರಿಸುತ್ತಲೇ ಇದ್ದ.

ಮರುದಿನ ಆ ಮಹಿಳೆ ಆಗಮಿಸಿದಳು. "ಡಾಕ್ಟರೇ, ನನ್ನ ನಾಯಿಮರಿ ಬಗ್ಗೆ ಹೇಳಿ, ಅದು ಏನು ಮಾಡುತ್ತಿದೆ?"

ವೈದ್ಯರು ಹೇಳಿದರು – "ಬಹುಷಃ ನಿಮ್ಮ ನಾಯಿ ನೀವು ಇಲ್ಲದ್ದು ನೋಡಿ ಸಂಕಟಪಡುತ್ತಿದೆ ಎಂದು ಭಾವಿಸುತ್ತೇನೆ" ಎಂದರು!

ವೈದ್ಯರ ಸಹಾಯಕನು ಆ ನಾಯಿಯನ್ನು ಕರೆತಂದನು.

ಆ ನಾಯಿ ಆ ಕೋಣೆಯನ್ನು ಪ್ರವೇಶಿಸಿದ ತಕ್ಷಣವೇ ಜಿಗಿದು ಆ ಮಹಿಳೆಯ ಮಡಿಲಲ್ಲಿ ಕುಳಿತುಕೊಂಡಿತು!

ಅದು ತನ್ನ ಬಾಲ ಅಲುಗಾಡಿಸುತ್ತಿತ್ತು. ತನ್ನ ಬಾಯಿ ಚಪ್ಪರಿಸುತ್ತಿತ್ತು!!

ಆ ಮಹಿಳೆಗೆ ತುಂಬಾ ಸಂತೋಷವಾಯಿತು. ಆಕೆ ಕೇಳಿದಳು : "ಡಾಕ್ಟರೇ , ಅಕಸ್ಮಾತ್ ಇಂತಹಾ ಸ್ಥಿತಿ ಬಂದಾಗ ತಾವು ಯಾವ ಚಿಕಿತ್ಸೆ ಮಾಡ್ತೀರಾ ಸಾರ್?"

ವೈದ್ಯರು ಹೇಳಿದರು : "ಈ ನಾಯಿಗೆ ನೀವು ದೊಡ್ಡ ಏರ್ ಕಂಡಿಷನರ್ ಕೊಠಡಿ, ಪ್ರತಿದಿನ ತುಂಬಾ ರುಚಿಕರವಾದ ಆಹಾರವನ್ನು ನೀಡುತ್ತಿದ್ದಿರಿ. ಅದನ್ನು ತಿಂದ ಅನಂತರ, ಅದು ತನ್ನನ್ನು ತಾನೇ ಈ ಮನೆಯ ಯಜಮಾನ ಎಂದು ಭಾವಿಸಿಕೊಂಡುಬಿಟ್ಟಿದೆ ಮತ್ತು ತನ್ನ ಮಾಲೀಕನ ಗುರುತನ್ನೇ ಮರೆತುಬಿಟ್ಟಿತ್ತು" ಎಂದರು.

ಆ ನಾಯಿಯ ಈ ಭ್ರಮೆಯನ್ನು ಮೊದಲು ಇಳಿಸಬೇಕಾಗಿತ್ತು. ಅದಕ್ಕಾಗಿ ರಾತ್ರಿಯಿಡೀ ಸ್ವಲ್ಪ ಮಾನಸಿಕ ಮತ್ತು ದೈಹಿಕ ಚಿಕಿತ್ಸೆಯನ್ನು ನೀಡಿದ್ದೇನೆ ಈಗ ಅದು ಎಲ್ಲ ರೀತಿಯಲ್ಲೂ ಸರಿಯಾಗಿದೆ ತಗೊಂಡು ಹೋಗಿ" ಎಂದರು.

ಸಂಕಲನ : ರೊ. ರಾಜೇಶ್ ಡಿ. ಶೆಣೈ

ಫೆಬ್ರವರಿ 03 ರ ಸಭೆಯ ಛಾಯಾಚಿತ್ರಗಳು

ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 29ನೇ ವಾರದ ಸಭೆ 3/2/2026ರಂದು RCC ಕಾರ್ಯಾಲಯದಲ್ಲಿ ನಡೆಯಿತು.

ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಅವರು ಅಧ್ಯಕ್ಷರಿಗೆ ಕೊರಳ ಲಾಂಛನ ತೊಡಿಸಿ ಅಧ್ಯಕ್ಷರು ಸಭೆಯನ್ನು ಆರಂಭಿಸಿದರು.

ರೊ. ಎ. ಗಣೇಶ್ ಅವರು ಪ್ರಾರ್ಥನೆ ನಡೆಸಿದರು.

ಅಧ್ಯಕ್ಷ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು.

ಜೊತೆ ಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ಅವರು ಕಳೆದ ವಾರದ ವರದಿಯನ್ನು ಮಂಡಿಸಿದರು.

ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕದ ಮೂವತ್ತೊಂದನೇ ಸಂಚಿಕೆಯನ್ನು ರೊ. ಕೊರಗಪ್ಪ ಶೆಟ್ಟಿಗಾರ್ ಬಿಡುಗಡೆ ಗೊಳಿಸಿದರು.

ರೊ. ಎ. ಗಣೇಶ್ ಅವರು ಜನವರಿ ತಿಂಗಳ ಆಯವ್ಯಯ ಪಟ್ಟಿಯನ್ನು ಮಂಡಿಸಿದರು.

ರೊ. ಗುರುಪ್ರಸಾದ್ ಕಾಮತ್ ಅವರು ಮಾತನಾಡಿ RCC ವಲಯ ಮಟ್ಟದ ಸಮಾವೇಶ ಸಂಭ್ರಮದ ಅನುಭವಗಳನ್ನು ಹಂಚಿಕೊಂಡರು.

ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಅವರು ಮಾತನಾಡಿ classification talk ಮುಂದುವರೆಯಬೇಕು ಎಂದರು.

ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಅವರು ಮುಂದಿನ ದಿನಗಳಲ್ಲಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸಭೆಗೆ ಬರುವಂತಾಗಲು ಪ್ರಯತ್ನಿಸುವುದಾಗಿ ತಿಳಿಸಿದರು.

ಜೊತೆ ಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ಅವರು ಧನ್ಯವಾದ ಸಮರ್ಪಿಸಿದರು.

ದಂಡಪಾಣಿ ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು.

ರಾಷ್ಟ್ರ ಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

"ಐಶ್ವರ್ಯ" 31ನೇ ಸಂಚಿಕೆ ಬಿಡುಗಡೆ

ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕದ ಮೂವತ್ತೊಂದನೇ ಸಂಚಿಕೆಯನ್ನು ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಅವರು 03/02026 ರಂದು ಬಿಡುಗಡೆಗೊಳಿಸಿದರು.

ನಾನು ಮತ್ತು ಪಲ್ಲವಿ ಭಾಗವಹಿಸಿದ ಮೊದಲ ರೋಟರಿ ಜಿಲ್ಲಾ ಸಮ್ಮೇಳನ

(2ನೇ ಪುಟದಿಂದ) ಸಿಬ್ಬಂದಿಗೆ ಆತ್ಮಸ್ಥೈರ್ಯ ತುಂಬಿದ್ದು, ದಾಳಿಯಲ್ಲಿ ಮೃತಪಟ್ಟ ಉದ್ಯೋಗಿಗಳ ಕುಟುಂಬಗಳಿಗೆ ಟಾಟಾ ಸಮೂಹವು ಅವರ ನಿವೃತ್ತಿಯವರೆಗಿನ ಪೂರ್ಣ ಸಂಬಳ, ಮಕ್ಕಳ ಶಿಕ್ಷಣದ ಜವಾಬ್ದಾರಿ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿದ್ದು, ಪ್ರತಿ ಕುಟುಂಬಕ್ಕೆ ₹36 ಲಕ್ಷದಿಂದ ₹85 ಲಕ್ಷದವರೆಗೆ ಆರ್ಥಿಕ ಸಹಾಯ ಹಸ್ತಾಂತರಿಸಿದ್ದು, ₹400 ಕೋಟಿಗೂ ಹೆಚ್ಚು ನಷ್ಟವಾದರೂ, ಕೇವಲ 21 ತಿಂಗಳಲ್ಲಿ ಹೋಟೆಲ್ ಪುನರ್ನಿರ್ಮಿಸಿದ್ದು, ತಾಜ್ ಹೋಟೆಲ್ ಸಿಬ್ಬಂದಿ ಮಾತ್ರವಲ್ಲ, ಉಗ್ರ ದಾಳಿಯಲ್ಲಿ ನೊಂದ ಕುಟುಂಬಗಳಿಗೆ ನೆರವು ನೀಡಿ, ರತನ್ ಟಾಟಾ ಅವರೇ ಖುದ್ದಾಗಿ ಹಲವು ಸಂತ್ರಸ್ಥರ ಮನೆಗಳಿಗೆ ಭೇಟಿ ನೀಡಿ ಅವರ ಕುಟುಂಬಕ್ಕೆ ನೆರವಾಗಿ ನಿಲ್ಲುವ ಭರವಸೆ ನೀಡಿ, ಕೊಟ್ಟ ಮಾತಿನಂತೆಯೇ ನಡೆದುಕೊಂಡರು. ರತನ್ ಟಾಟಾ ಅವರ ಈ ನಾಯಕತ್ವವು ಲಾಭಕ್ಕಿಂತ ಹೆಚ್ಚಾಗಿ ಮನುಷ್ಯತ್ವಕ್ಕೆ ಆದ್ಯತೆ ನೀಡುತ್ತದೆ ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದನ್ನೆಲ್ಲ ಪ್ರಸ್ತಾವಿಸಿ, ಜ್ಞಾನವು ಜೀವನ ಮೌಲ್ಯಗಳೊಂದಿಗೆ ಸಮ್ಮಿಳಿತಗೊಳ್ಳಬೇಕು ಎಂದರು.

ಬಳಿಕ ಮಿಮಿಕ್ರಿ ಗೋಪಿಯವರು ದೈನಂದಿನ ಬದುಕಿನಲ್ಲಿ ಹಾಸ್ಯದ ಹೊನಲಿನ ಬಗ್ಗೆ ಮಾತನಾಡಿ, ಹೇಗೆ ಹೆಣ್ಣೊಂದು ಕುಟುಂಬಕ್ಕೆ ಆಸರೆಯಾಗಿ ನಿಲ್ಲುತ್ತದೆ ಎಂದು ವಿವರಿಸಿ ಹೆಣ್ಣು ಭ್ರೂಣಹತ್ಯೆ ತಡೆಗಟ್ಟುವಲ್ಲಿ ಶ್ರಮಿಸಲು ಕರೆನೀಡಿದರು.

ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ನಮ್ಮ ಸದಸ್ಯೆ, ವಲಯ ಸೇನಾನಿ ರೊ. ಸ್ಮಿತಾ ಕಾಮತ್ ರಿಗೆ ಸಮ್ಮೇಳನದ ಬಗ್ಗೆ ಅವಲೋಕನ ಮಾಡಿ ಅಭಿಪ್ರಾಯ ನೀಡುವ ಅವಕಾಶ ದೊರೆಯಿತು. ಅದನ್ನು ಸುಂದರವಾಗಿ ಬಳಸಿಕೊಂಡ ಅವರು ಸಂಕ್ಷಿಪ್ತವಾಗಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

(ಇಲ್ಲಿಗೆ ಈ ಪ್ರವಾಸ ಕಥನ ಮುಗಿಯಿತು).